ಅವು ಇಂದಲ್ಲ ನಾಳೆ ಸವಕಲಾಗುತ್ತವೆ. ಪ್ರತಿ ವೃತ್ತಿಯವರು ಎಲ್ಲ ಕಾಲದಲ್ಲೂ ತಮ್ಮ ಶಬ್ದಕೋಶವನ್ನು ಬದಲಿಸುತ್ತಲೇ ಇರುತ್ತಾರೆ. ಆದರೆ, ಪ್ರತಿ ಭಾಷೆಯಲ್ಲೂ ಮೂಲಭೂತವಾದ ಪರಿಶುದ್ಧ ಮನುಷ್ಯ ಭಾಷೆಯೊಂದು ಇದ್ದೇ ಇರುತ್ತದೆ. ಅದೇ ಕವಿ ಹಾಗೂ ಲೇಖಕರ ಭಾಷೆ. ಆರು ವರ್ಷದ ಮಗುವಿಗೆ ಕೂಡ ಅರ್ಥವಾಗುವಂತೆ ಸರಳವಾಗಿ, ಸ್ಪಷ್ಟವಾಗಿ ಶುದ್ಧ ಭಾಷೆಯಲ್ಲಿ ಮಾತಾಡಬೇಕು. ಅದರಲ್ಲಿ ಅರ್ಥಗಳಿರಬೇಕು, ಧ್ವನಿಯಿರಬೇಕು.

◆ **ಸ್ವತಃ ಅರಿತು ಬರೆಯಬೇಕೆ ಹೊರತು ಪಠ್ಯಪುಸ್ತಕಗಳನ್ನು ನೋಡಿ ಬರೆಯಬಾರದು ಎಂದು ಹೇಳಿದಿರಿ. ಪ್ರತಿಯೊಬ್ಬ ಲೇಖಕನೂ ಇದನ್ನು ಒಪ್ಪುತ್ತಾನೆ. ಪುರುಷ ಪಾತ್ರಗಳ ಸೃಷ್ಟಿಯ ಬಗ್ಗೆ ಏನು ಹೇಳುವಿರಿ? ಜಾರ್ಜ್ ಎಲಿಯೆಟ್ (ಇಂಗ್ಲಿಷ್ ಕಾದಂಬರಿಕಾರ್ತಿ) ಅಂತಹ ಅತ್ಯುತ್ತಮ ಲೇಖಕಿಯರು ಕೂಡ ಇದರಲ್ಲಿ ಸೋತಿದ್ದಾರೆ. ನೀವು?**

ಗಂಡಸು ಅಥವ ಹೆಂಗಸು ಅಥವ ಮಗು ಹೀಗೆ ಮನುಷ್ಯರನ್ನು ಅರ್ಥಮಾಡಿಕೊಳ್ಳುವುದು ನನ್ನ ಕೆಲಸವಲ್ಲ. ನನ್ನೊಂದಿಗಿರುವವರನ್ನು ನೋಡಿ ಅರ್ಥಮಾಡಿಕೊಂಡಿದ್ದೇನೆ. ನಾನು ಯಾವಾಗಲೂ ಅಂದಂದಿನ ಸಂದರ್ಭಗಳಲ್ಲಿಯೇ ಬದುಕುತ್ತಿರುತ್ತೇನೆ. ನಿಮಗೆ ಗಂಡಸರ ಬಗ್ಗೆ ಹೇಗೆ ಗೊತ್ತು ಅಂತ ಗಂಡಸರು ಪ್ರಶ್ನಿಸಿದರೆ ನನ್ನ ಉತ್ತರವಿಷ್ಟೆ: ನಾನು ಗಂಡಸರ ಬಗ್ಗೆ ತಿಳಿದುಕೊಂಡಿದ್ದು ಗಂಡಸರಿಂದಲೇ. ಗಂಡಸರ ಮನಸ್ಸು ಹೆಂಗಸರ ಮನಸ್ಸು ಅಂತ ತಾನೇ ವಿಮರ್ಶಕರು ಹೇಳುವುದು. ನಾನು ತಿಳಿವಳಿಕೆಯೊಂದಿಗೆ ಮಾತಾಡಿದರೆ ಅವರು ನನ್ನದು ಗಂಡು ಮನಸ್ಸು ಅನ್ನುತ್ತಾರೆ. ಅಸಂಬದ್ಧವಾಗಿ, ಅಪ್ರಸ್ತುತವಾಗಿ ಮಾತಾಡಿದರೆ ಟಿಪಿಕಲ್ ಹೆಣ್ಣು ಮನಸ್ಸು ಎನ್ನುತ್ತಾರೆ! ಆದರೆ, ನನಗೆಂದೂ ಹೆಣ್ಣಾಗಿರುವುದು ಅಸಹಜ ಅನ್ನಿಸಿಲ್ಲ.

◆ **ಕಲಾವಿದೆಯಾಗಿ ಹೆಣ್ಣಾಗಿರುವುದು ನಿಮಗೆ ವಿಶೇಷ ತೊಂದರೆಗಳನ್ನು ಒಡ್ಡಿದೆ ಅನ್ನಿಸಿಲ್ಲವೆ?**

ಹೆಣ್ಣುಮಕ್ಕಳನ್ನು ಬೆಳೆಸುವಾಗಲೇ ಅವರು ತಮ್ಮ ವ್ಯಕ್ತಿತ್ವವನ್ನು ಹಲವು ಭಾಗಗಳಾಗಿ ಹರಿದು ಹಂಚಿಕೊಂಡು ಬದುಕಲು ಪ್ರೇರೇಪಿಸುತ್ತಾರೆ. ಯಾವುದೇ ಕಲೆಯಾದರೂ ಇಡಿಯಾದ ಸಮಗ್ರ ವ್ಯಕ್ತಿತ್ವವನ್ನು ಬೇಡುತ್ತದೆ. ಹೀಗಾದಾಗ ಶಕ್ತಿಯ ಕೊರತೆ ಕಾಡುತ್ತದೆ.

ಹೌದು ಅದು ನಿಜ. ಹೆಣ್ಣುಮಕ್ಕಳನ್ನು ಹೆಣ್ತನದ ಪರಿಶುದ್ಧತೆಯ ಕಲ್ಪನೆಯಡಿಯಲ್ಲಿ ಬೆಳೆಸಲಾಗುತ್ತದೆ. ಸೇವೆಯ ಅವಶ್ಯಕತೆ ಇರುವವರಿಗೆ ಸೇವೆ ಮಾಡಬೇಕು ಎನ್ನುವುದನ್ನೊಂದು ಆಧ್ಯಾತ್ಮಿಕ ಭಾವದಂತೆ ತುಂಬಲಾಗುತ್ತದೆ. ಬಹುಶಃ ಅದಕ್ಕೆ ಈ ಕಾದಂಬರಿಯನ್ನು ಬರೆಯಲು ನನಗೆ ಇಪ್ಪತ್ತೆರೆಡು ವರ್ಷಗಳು ಬೇಕಾದವು.

◆ **ಸ್ವಲ್ಪ ಹೊತ್ತಿಗೆ ಮುಂಚೆ ಹೇಳಿದಿರಿ ಕತೆಯನ್ನು ಬರೆಯಲು ಒಂದು ಗಳಿಗೆಯ ಏಕಾಗ್ರತೆ ಸಾಕು ಎಂದು.**

ನಾನು ಯಾವಾಗಲೂ ಕತೆಯನ್ನು ಒಂದೇ ಪಟ್ಟಿಗೆ ಬರೆದು ಮುಗಿಸುವೆ. 'Flowering Judas' ರಾತ್ರಿ ಏಳಕ್ಕೆ ಶುರುಮಾಡಿದೆ. ಒಂದೂವರೆ ಹೊತ್ತಿಗೆ ಅದನ್ನು ಹಿಡಿದು ಅಂಚೆಪೆಟ್ಟಿಗೆಯ ಮುಂದೆ ನಿಂತಿದ್ದೆ. ಎರಡು ಕಿರುಕಾದಂಬರಿಗಳನ್ನು ಬರೆಯುವಾಗಲೂ ಹಸ್ತಪ್ರತಿಯನ್ನು ಸೂಟ್‌ಕೇಸ್‌ನೊಂದಿಗೆ ಎತ್ತಿಕೊಂಡು ಜಾರ್ಜ್‌ಟೌನ್, ಪೆನ್ಸುಲ್ವೇನಿಯಾಗೆ ಹೋದೆ. ಎಲ್ಲಿದ್ದೇನೆ ಎನ್ನುವ ವಿಳಾಸ ಕೂಡ ಕೊಟ್ಟಿರಲಿಲ್ಲ! ಹದಿನಾಲ್ಕು ದಿನಗಳ ತರುವಾಯ 'Old Mortality, Noon Wine' ಬರೆದು ಮುಗಿಸಿದ್ದೆ.